# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 640/2016 ಸಿಡಬ್ಲ್ಯೂ: 4 ಪಿಡಬ್ಲ್ಯೂ: 7

ಪ್ರಮಾಣವಚನ ಬೋಧಿಸಲಾಯಿತು ದಿಃ 29-04-2026

ಹೆಸರು : ರತ್ನಮ್ಮ

ಗಂಡ ಹೆಸರು : ಮಲ್ಲಪ್ಪ

ವಯಸ್ಸು : 60 ವರ್ಷ

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ತೆಲಕೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ಮತ್ತು 7 ನನ್ನ ಮಗ, ಚಾ ಸಾ 6 ನನ್ನ ಗಂಡ, ಚಾ ಸಾ 5 ಗೊತ್ತು. ಆರೋಪಿತರು ಗೊತ್ತು. ಸುಮಾರು 10 ವರ್ಷಗಳ ಹಿಂದೆ ಬೆಳಿಗ್ಗೆ 06-00 ಗಂಟೆ ಸುಮಾರಿಗೆ ನಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು. ಆಗ ನಾನು, ಚಾ ಸಾ 1, 6 ಮತ್ತು 7 ರವರು ಮನೆಯಲ್ಲಿದ್ದೇವೆ. ಆಗ ಆರೋಪಿತರು ಬಂದು ನಾವು ನಮ್ಮ ಗೋಡೆಯ ಮೇಲೆ ಇಟ್ಟಿದ್ದ ಕಟ್ಟಿಗೆಗಳನ್ನು ಉರುಳಿಸಿದ್ದರು. ಅದಕ್ಕೆ ಚಾ ಸಾ 1 ರವರು ಪ್ರಶ್ನಿಸಿದಾಗ 1 ಮತ್ತು 3 ನೇ ಆರೋಪಿತರು ಕಟ್ಟಿಗೆಯಿಂದ ಚಾ ಸಾ 1 ರವರು ತಲೆಯ ಮೇಲೆ ಮತ್ತು ಬೆನ್ನಿನ ಮೇಲೆ ಹೊಡೆದರು. ಆಗ ನಾನು ಜಗಳ ಬಿಡಿಸಲು ಹೋದಾಗ 4 ಮತ್ತು 5 ನೇ ಆರೋಪಿತರು ನನಗೆ ಹೊಡೆ ಬಡೆ ಮಾಡಿರುತ್ತಾರೆ. ಚಾ ಸಾ 7 ರವರಿಗೆ ಹೋಡೆ ಬಡೆ ಮಾಡಿರುವುದಿಲ್ಲ. 1 ರಿಂದ 3 ನೇ ಆರೋಪಿತರು ಸೇರಿ ನನ್ನ ಗಂಡನಾದ ಚಾ ಸಾ 6 ರವರಿಗೆ ಬೆನ್ನಿಗೆ ಮತ್ತು ಕಾಲಿಗೆ ಹೊಡೆದಿರುತ್ತಾರೆ. ಆಗ ಚಾ ಸಾ 5 ರವರು ಬಂದು ಜಗಳ ಬಿಡಿಸಿರುತ್ತಾರೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.09-03-2016 ರಂದು ಬೆಳ್ಳಿಗ್ಗೆ 06-00 ಗಂಟೆ ಸುಮಾರಿಗೆ ನಾವೆಲ್ಲಾರು ಮನೆಯಲ್ಲಿದ್ದಾಗ ನಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು ಎಂದರೆ ಸರಿ. ನಾವೆಲ್ಲಾರೂ ಮನೆಯಲ್ಲಿದ್ದಾಗ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿತನು ಚಾ ಸಾ 1

ರವರಿಗೆ ಕಲ್ಲಿನಿಂದ ಬೆನ್ನಿಗೆ ಹೊಡೆದನು ಎಂದರೆ ಸರಿ. ಆಗ ನಾನು ಮತ್ತು ಚಾ ಸಾ 6 ರವರು ಜಗಳ ಬಿಡಿಸಲು ಹೋದಾಗ 4 ಮತ್ತು 5 ನೇ ಆರೋಪಿತರು ನನ್ನ ಕೂದಲು ಹಿಡಿದು ಎಳೆದಾಡಿ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿ. ಆಗ ಜಗಳ ಬಿಟ್ಟು ಹೋಗುವಾಗ ಈಸಲ ಉಳಿದುಕೊಂಡಿದ್ದರಿ ಇನೊಂಮ್ಮೆ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಗೆ ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಮು ಮಾ 1 ಮತ್ತು 2 ನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಇದೇ ಬಡಿಗೆ ಮತ್ತು ಕಲ್ಲಿನಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಐ ವಕೀಲರಿಂದ:

ಘಟನೆ ನಡೆದ ದಿನ ನಾನು ಮನೆಯಲ್ಲಿ ಮಲಗಿಕೊಂಡಿದ್ದೇನೆ ಎಂದರೆ ಸರಿ. ಆದ್ದರಿಂದ ನನಗೆ ಹೊರಗೆ ಏನು ಜಗಳ ಆಗಿದೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ಚಾ ಸಾ 1 ರವರ ಸಪ್ಪಳ ಕೇಳಿ ಮನೆಯ ಹೊರಗಡೆ ಬಂದು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಹಿರಿಯರ 4 ಕರೆ ಆಸ್ತಿ ಇತ್ತು ಎಂದರೆ ಸರಿ. ಸದರಿ ಆಸ್ತಿಯ ಬಗ್ಗೆ ನಮಗೂ ಮತ್ತು ಆೋಪಿತರಿಗೂ ತಕರಾರು ಇತ್ತು ಎಂದರೆ ಸಾಕ್ಷಿಯು ಅದು ಇನ್ನೂ ನಡೆಯುತ್ತಿದೆ ಎಂದು ನುಡಿಯುತ್ತಾರೇ. 5 ನೇ ಆರೋಪಿತರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. 5 ನೇ ಆರೋಪಿತಳು ತನ್ನ ಪಾಲಿಗೆ ಬಂದಿರುವ ಆಸ್ತಿಯನ್ನು 2 ನೇ ಆರೋಪಿತನಿಗೆ ಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಗೊತ್ತಿಲ್ಲ. 5 ನೇ ಆರೋಪಿತಳು 2 ನೇ ಆರೋಪಿಗೆ ಹೊಲ ಕೊಡಬಾರದು ಎಂದು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು ಮಾ 1 ಮತ್ತು 2 ಎಲ್ಲಾ ಕಡೆ ಲಭ್ಯ ಇರುತ್ತದೆ ಎಂದರೆ ಸರಿ.

ದಿ.09-03-2016 ರಂದು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ನಾವೆಲ್ಲಾರು ಮನೆಯಲ್ಲಿದ್ದಾಗ ನಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾವೆಲ್ಲಾರೂ ಮನೆಯಲ್ಲಿದ್ದಾಗ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. 1 ನೇ ಆರೋಪಿತನು ಚಾ ಸಾ 1 ರವರಿಗೆ ಕಲ್ಲಿನಿಂದ ಬೆನ್ನಿಗೆ ಹೊಡೆದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು ಮತ್ತು ಚಾ ಸಾ 6 ರವರು ಜಗಳ ಬಿಡಿಸಲು ಹೋದಾಗ 4 ಮತ್ತು 5 ನೇ ಆರೋಪಿತರು ನನ್ನ ಕೂದಲು ಹಿಡಿದು ಎಳೆದಾಡಿ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಜಗಳ ಬಿಟ್ಟು ಹೋಗುವಾಗ ಈಸಲ ಉಳಿದುಕೊಂಡಿದ್ದರಿ ಇನೊಂಮ್ಮೆ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ

ಎಂದು ಬೆದರಿಗೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಮು ಮಾ 1 ಮತ್ತು 2 ನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಇದೇ ಬಡಿಗೆ ಮತ್ತು ಕಲ್ಲಿನಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**